ವೆಂಕಟೇಶ್ವರುಲು ಮಾತುಗಳಲ್ಲಿ ತೀವ್ರ ಕಳಕಳಿಯಿತ್ತು. ಯದುನಂದನ ನಿಂತಲ್ಲಿಂದಲೇ ತಲೆ ತಗ್ಗಿಸಿ ರಂಗರಾವ್‌ಗೆ ವಂದಿಸಿದ್ದ.

'ನೀನ್ಯಾರೆಂದು ನನಗೆ ಗೊತ್ತು, ನಾನ್ಯಾರೆಂದು ನಿನಗೆ ತಿಳಿದಿದೆಯೇ' ರಂಗರಾವ್ ಯದುನಂದನನ ಮುಖವನ್ನು ದಿಟ್ಟಿಸಿ ಕೇಳಿದ್ದರು.

'ಗೊತ್ತು. ನೀವು ದೇವರು. ಈ ಜೈಲಿನಲ್ಲಿ ಪ್ರತಿಯೊಬ್ಬ ಕೈದಿಗೂ ನೀವು ದೇವರೆ' ಯದುನಂದನನ ಮುಖ ಮತ್ತು ಧ್ವನಿ ಎರಡರಲ್ಲೂ ಪ್ರಶಾಂತತೆ ತುಂಬಿತ್ತು.

'ನಿನ್ನ ವಿವರಗಳನ್ನು ಓದಿದೆ, ಬರುವ ಆಗಸ್ಟ್ ಹದಿನೈದು ಅಂದರೆ ಇನ್ನೆರಡು ತಿಂಗಳಿಗೆ ನೀನು ಬಿಡುಗಡೆ ಹೊಂದುತ್ತಿರುವೆ...'

'ನನಗೆ ಅವಾರ್ಡ್ ಆಗಿರುವುದು ಜೀವಾವಧಿ ಶಿಕ್ಷೆ. ದಯವಿಟ್ಟು ನಾನು ಸಾಯುವವರೆಗೂ ಜೈಲಿನಲ್ಲೆ ಇರಲು ಬಿಡಿ ಸರ್' ರಂಗರಾವ್ ಅವರ ಮಾತುಗಳನ್ನು ಮಧ್ಯದಲ್ಲಿ ತುಂಡರಿಸಿ ಹೇಳಿದ ಯದುನಂದನನ ಮಾತುಗಳಲ್ಲಿ ಭಾವುಕತೆ ತುಂಬಿಕೊಂಡಿತ್ತು.



'ನಿಮ್ಮ ಕುಟುಂಬ ಹೇಗಿದೆ ಈಗ ಮತ್ತು ಎಲ್ಲಿದೆ' ನಿರ್ಭಾವುಕರಾಗಿ ಕೇಳಿದ್ದರು ರಂಗರಾವ್.

'ಎಲ್ಲವನ್ನೂ ನಾನು ಹೇಳ್ತೀನಿ ಸರ್' ಎಂದು ಸೂಪರಿನ್ಟೆಂಡೆಂಟ್ ವೆಂಕಟೇಶ್ವರುಲು, ರಂಗರಾವ್ ಬಳಿ ಕುಳಿತಿದ್ದರು. ರಂಗರಾವ್ ಅಚ್ಚರಿಯಿಂದ ವೆಂಕಟೇಶ್ವರುಲು ಮುಖ ನೋಡಿದ್ದರು.

'ನಾನು ಮೂರು ವರ್ಷಗಳ ಹಿಂದೆ ರಾಜಮಂಡ್ರಿ ಸೆಂಟ್ರಲ್ ಜೈಲಿನಲ್ಲಿದ್ದಾಗ ಈ ಯದುನಂದನ ನನ್ನ ಚಿತ್ತವನ್ನು ಸೆಳೆದಿದ್ದ. ಹಾಗಾಗಿ ಇವನ ಕ್ರೈಂ ಹಿಸ್ಟರಿಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಅವನಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಮೈಕ್ರೊ ವಿಚಾರಣೆಗೆ ಒಳಪಡಿಸಿದೆ. ಆ ಘಟನೆ ನಡೆದ ನಂತರ ಇವನು ಭೂಗತನಾದ. ಆದರೆ, ನಂಬಿ ಬಂದ ಹೆಣ್ಣು, ಹೆತ್ತ ತಾಯಿ ಬಲವಾಗಿ ಕಾಡತೊಡಗಿದರು. ವಿಶಾಖಪಟ್ಟಣ ಹಡಗು ನಿರ್ಮಾಣ ಕೇಂದ್ರದಲ್ಲಿ ಇವನ ಕ್ಲಾಸ್ ಮೇಟ್ ಮತ್ತು ಕ್ಲೋಸ್ ಫ್ರೆಂಡ್ ಜೊತೆ ಮಾತನಾಡಿ ತಾನು ಮದುವೆಯಾಗಬೇಕೆಂದಿದ್ದ ಹೆಣ್ಣನ್ನು ಒಪ್ಪಿಸಿದ್ದ. ಈಗ ಆಕೆಯೂ ಹಡಗು ನಿರ್ಮಾಣ ಕೇಂದ್ರದಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾಳೆ ಗಂಡನ ಜತೆ. ಅವರಿಗೆ ಒಬ್ಬ ಮಗ ಇದ್ದಾನೆ. ಹೆಸರು ಯದುನಂದನ. ತನ್ನ ಮಗನನ್ನು ಐಪಿಎಸ್ ಮಾಡಿಸಬೇಕೆಂದು ಆಕೆಯ ಆಸೆ. ಹುಡುಗ ತುಂಬಾ ಪ್ರತಿಭಾವಂತ. ಈ ಯದುನಂದನನ ತಾಯಿಯನ್ನು ಅವರಿಬ್ಬರೂ ಸ್ವಂತ ತಾಯಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದಾರೆ. ನಿಮಗೆ ಬೆಳಿಗ್ಗೆ ಬಿಡುಗಡೆಯಾಗಲಿರುವ ಕೈದಿಗಳ ಲಿಸ್ಟ್ ಕೊಟ್ಟು ಹೋದಾಗಲೇ ಇವನನ್ನು ಭೇಟಿಯಾಗಲು ನೀವು ಬಯಸುತ್ತೀರೆಂದು ನನಗೆ ತಿಳಿದಿತ್ತು. ಹಾಗಾಗಿ ರಂಗರಾಜುವಿಗೆ ನನಗೆ ತಿಳಿಸಲು ಹೇಳಿದ್ದೆ. ಕೆಲವೊಮ್ಮೆ ಕೆಲವರ ಬದುಕಿನಲ್ಲಿ ವಿಚಿತ್ರ ಘಟನೆಗಳು ಸಂಭವಿಸುತ್ತವೆ ಸರ್. ಅದನ್ನೇ ಫೇಟ್ ಅಂಥ ಕರೆಯೋದು...' ವೆಂಕಟೇಶ್ವರುಲು ಮಾತು ನಿಲ್ಲಿಸಿದ್ದರು.

ಯದುನಂದನ ಬಿಕ್ಕಳಿಸಿ ಅಳುತ್ತಿದ್ದ. ರಂಗರಾವ್ ಕಣ್ಣುಗಳು ತೇವಗೊಂಡಿದ್ದವು. ವೆಂಕಟೇಶ್ವರುಲು ಜೈಲರ್ ರಂಗರಾಜುವಿಗೆ ಯದುನಂದನನನ್ನು ವಾಪಸ್ ಕರೆದುಕೊಂಡು ಹೋಗಲು ಹೇಳಿದ್ದರು. ಯದುನಂದನ ಹೋಗುವುದನ್ನೇ ನೋಡುತ್ತಾ ರಂಗರಾವ್ ಮೆಲ್ಲನೆ, 'ಅವನು ಅನೇಕ ವರ್ಷಗಳಿಂದ ದೈಹಿಕವಾಗಿ ಜೈಲಿನಲ್ಲಿದ್ದಾನೆ. ನಾನೇ ಮಾಡಿದ ತಪ್ಪಿಗಾಗಿ ನಾನು ನಿರಂತರವಾಗಿ ಮಾನಸಿಕ ಜೈಲು ವಾಸವನ್ನು ಅನುಭವಿಸುತ್ತಿದ್ದೇನೆ' ಎಂದು ನಿಟ್ಟುಸಿರು ಬಿಟ್ಟಿದ್ದರು.

'ಹಾಗೆ ನೋಡಿದರೆ ಈ ಜಗತ್ತು ಕೂಡಾ ಒಂದು ಜೈಲು ಇದ್ದಂತೆ ಸರ್. ಇಲ್ಲಿ ವಾಸಿಸುವ ಪ್ರತಿಯೊಂದು ಜೀವಿಯೂ ಸೆರೆಮನೆಯಲ್ಲಿ ಇದ್ದಂತೆಯೇ. ಬಿ ಕೂಲ್ ಸರ್' ಎಂದು ವೆಂಕಟೇಶ್ವರುಲು ರಂಗರಾವ್‌ಗೆ ಸೆಲ್ಯೂಟ್ ಹೊಡೆದು ತೆರಳಿದರು.

ಮನೆಯ ಮುಂಭಾಗದ ತಮ್ಮ ಮಾಮೂಲಿ ಜಾಗದಲ್ಲಿ ಹೋಗಿ ಕುಳಿತು ರಂಗರಾವ್ ಆಕಾಶಕ್ಕೆ ಕಣ್ಣು ನೆಟ್ಟಿದ್ದರು.

●